ಇ) 12 ವೈದ್ಯರ ಖಾಲಿ ಹುದ್ದೆ ಇದೆ. ವಿವರ ಆ ಕೆಳಕಂಡಂತೆ ಇದೆ.

1.	ಸಾರ್ವಜನಿಕ ಆಸ್ಪತ್ರೆ ಹುಮ್ನಾಬಾದ್	-	3
2.	ಎನ್‌ಎಲ್‌ಸಿಸಿ ಹುಮ್ನಾಬಾದ್	-	1
3.	ಸಾರ್ವಜನಿಕ ಆಸ್ಪತ್ರೆ, ಬಸವಕಲ್ಯಾಣ	-	1
4.	ಸಾರ್ವಜನಿಕ ಆಸ್ಪತ್ರೆ, ಔರಾದ್	-	2
5.	ಸಾರ್ವಜನಿಕ ಆಸ್ಪತ್ರೆ, ಭಾಲ್ಕಿ	-	3
6.	ಪ್ರಾ. ಆ. ಕೇಂದ್ರ ಸಂತಾಪೂರ್	-	1
7.	ಪ್ರಾ. ಆ. ಕೇಂದ್ರ ಚಟಗುಪ್ಪ	-	1
		ಒಟ್ಟು	12

ಈ) ತಾಲ್ಲೂಕು ಆಸ್ಪತ್ರೆಗಳಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳನ್ನು ಸ್ನಾತಕೋತ್ತರ ವ್ಯಾಸಂಗ ಮುಗಿಸಿ ಹಿಂತಿರುಗಿ ಬರುವ ವೈದ್ಯರನ್ನು ಭರ್ತಿ ಮಾಡಲು ಮತ್ತು ಎಪ್ರಿಲ್, ಮೇ, 99ರ ಸಾರ್ವತ್ರಿಕ ವರ್ಗಾವಣೆ ಸಮಯದಲ್ಲಿ ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು. ಗ್ರಾಮಾಂತರದಲ್ಲಿ ಖಾಲಿ ಇರುವ ವೈದ್ಯರ ಹುದ್ದೆಯನ್ನು ಜಿಲ್ಲಾಧಿಕಾರಿಗಳು ಗುತ್ತಿಗೆ ಆಧಾರದ ಮೇಲೆ ವೈದ್ಯರನ್ನು ನೇಮಕ ಮಾಡಲಾಗುವ ಸಮಯದಲ್ಲಿ ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲು ಸೂಚಿಸಲಾಗಿದೆ.

ಉ) 1998-99ನೇ ಸಾಲಿನಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕ್ರೇಂದ್ರ ಮತ್ತು ಪ್ರಸೂತಿ ಗೃಹಗಳನ್ನು ಮಂಜೂರು ಮಾಡುವುದಕ್ಕೆ ಸಂಬಂಧಿಸಿದಂತೆ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಹೊಲಿಗೆ ಶಿಕ್ಷಣ ತರಬೇತಿ ಪಡೆದವರ ನೇಮಕಾತಿ.

786(1097) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) :— ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಿ.ಸಿ.ಟಿ ಹೊಲಿಗೆ ತರಬೇತಿ ಪಡೆದ ಮಹಿಳೆಯರನ್ನು ಪ್ರೌಢಶಾಲೆಯಯಲ್ಲಿ ಹೊಲಿಗೆ ಶಿಕ್ಷಕಿ ಅಂತ ನೇಮಕಾತಿ ಮಾಡುವುದನ್ನು ನಿಲ್ಲಿಸಲು ಕಾರಣಗಳೇನು?

ಆ) ಸಿ.ಸಿ.ಟಿ ತರಬೇತಿ ಪಡೆದಂಥ ಮಹಿಳಾ ವರ್ಗದವರಿಗೆ ಸರ್ಕಾರ ಯಾವ ಉದ್ಯೋಗ ಯೋಜನೆಯನ್ನು ರೂಪಿಸಿದೆ. (ವಿವರ ನೀಡುವುದು)

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು) :—

ಅ) ನಿಲ್ಲಿಸಿರುವುದಿಲ್ಲ.

ಆ) ಪ್ರಸ್ತುತ ಚಾಲ್ತಿಯಲ್ಲಿರುವ ನೇಮಕಾತಿ ನಿಯಮಗಳ ಅಡಿಯಲ್ಲಿ ಅವರು ಸರ್ಕಾರಿ ಪ್ರೌಢಶಾಲೆಗಳ ಹೊಲಿಗೆ ಶಿಕ್ಷಕರ ನೇಮಕಾತಿಗೆ ಅರ್ಹರಿರುತ್ತಾರೆ.

ಹೊಲಿಗೆ ಶಿಕ್ಷಣ ಸಂಸ್ಥೆಗಳು ಮುಚ್ಚಿರುವುದು.

787 (1107) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) :— ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಆರ್ಥಿಕ ಮುಗ್ಗಟ್ಟಿನಿಂದಾಗಿ ಹಾಗೂ ಸರ್ಕಾರದ ಅಲ್ಪ ಅನುದಾನದಿಂದಾಗಿ ರಾಜ್ಯದಲ್ಲಿ 800 ಹೊಲಿಗೆ ಶಿಕ್ಷಣ ಸಂಸ್ಥೆಗಳು ಮುಚ್ಚಲ್ಪಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಮುಚ್ಚಲ್ಪಟ್ಟ ಹೊಲಿಗೆ ಶಿಕ್ಷಣ ಸಂಸ್ಥೆಗಳಿಗೆ ಕಾಯಕಲ್ಪ ನೀಡಲು ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು)

ಶ್ರೀ ಬಿ.ಎ. ಮೊಹಿದ್ದೀನ್ (ಉನ್ನತ ಶಿಕ್ಷಣ ಸಚಿವರು) :—

ಅ) ಶಿಕ್ಷಣ ಇಲಾಖೆಯ ತಾಂತ್ರಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಸುಮಾರು 47 ಟೈಲರಿಂಗ್ ಇನ್ಸ್‌ಟಿಟ್ಯೂಟ್‌ಗಳು ಇದ್ದು ಎಲ್ಲಾ ಸಂಸ್ಥೆಗಳು ಅನುದಾನ ಪಡೆಯುತ್ತಿವೆ. ಇದುವರೆಗೂ ಯಾವ ಸಂಸ್ಥೆಯು ಮುಚ್ಚಿರುವ ಬಗ್ಗೆ ವರದಿ ಬಂದಿರುವುದಿಲ್ಲ. ಅನುದಾನ ಪಡೆಯದೇ ಖಾಸಗಿ ಅಭ್ಯರ್ಥಿಗಳಿಗೆ ತರಬೇತಿ ನೀಡುತ್ತಿರುವ 252 ಟೈಲರಿಂಗ್ ಶಾಲೆಗಳಿದ್ದು, ಈ ಎಲ್ಲಾ ಅಭ್ಯರ್ಥಿಗಳಿಗೂ ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿಯಿಂದ ಪರೀಕ್ಷೆ ನಡೆಸಲಾಗುತ್ತಿದೆ. ಆ ಪೈಕಿ ಯಾವ ಸಂಸ್ಥೆಯೂ ಮುಚ್ಚಿರುವ ಬಗ್ಗೆ ಇಲಾಖೆಗೆ ಮಾಹಿತಿ ಇರುವುದಿಲ್ಲ.

ಆ) ಮೇಲ್ಕಂಡ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಹುಬ್ಬಳ್ಳಿ ನಗರದಲ್ಲಿ ಮಹಿಳಾ ಪಾಲಿಟೆಕ್ನಿಕ್ ಕಾಲೇಜು.

788(1108) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) :— ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಂಗಳೂರು ಮೈಸೂರು, ಮಂಗಳೂರು, ಹಾಸನ, ಶಿವಮೊಗ್ಗ, ಕೋಲಾರ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ 2 ಕಿಂತ ಹೆಚ್ಚು ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜುಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಹುಬ್ಬಳ್ಳಿ ನಗರದಲ್ಲಿ ಕೇವಲ ಒಂದು ಮಹಿಳಾ ಪಾಲಿಟೆಕ್ನಿಕ್ ಕಾಲೇಜು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;